Regn No BC 155 — ೬೯ — 7—4—1962

Sri "SATYAVADI"
— DAILY —
MYSORE4
46 th Year

ಸತ್ಯವಾದಿ
SATYAVADI

ಪ ಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow ಸ್ಥಾಪಕರು— ಅರಮನೆ ಸಿಂಸ್ಥೇದಾರ್ ಎಂ. ಏ ಸುಬ್ಬರಾಯಿರು [ಬಿಡಿ ಪ್ರತಿ 3 ಪೈ ಗೋಸಂರಕ್ಷಣೆ ಮಾಡಿ

ಡೀಸೆಲ್ ಇಂಜಿನ್ ನಾಶ
22 ಲಕ್ಷ ರೂ. ನಷ್ಟ

ಮೊನ್ನೆ ರಾತ್ರಿ ಎಂದು ಭಾರಿ ರೈಲ್ವೆ ಡೀಸೆಲ್ ಇಂಜಿನ್‌ಗಳು ಆಕಸ್ಮಿಕ ಅದಬೆಂಕಿ ಅನಾಹುತದಿಂದ ನಾಶವಾದವು ಒಂದು ಗಯಾ ನಿಲ್ದಾಣದ ಬಳಿ ಆಯಿತು ಮತ್ತೊಂದು ಇಷ್ಟಾಂಪುರ ನಿಲ್ದಾಣದಲ್ಲಿ ಆಯಿತು. ಯಾರಿಗೂ ಅಪಾಯವಾಗಿಲ್ಲ. ಆಗಿರುವ ನಷ್ಟ ರೂ 22 ಲಕ್ಷ.

ಆಚಾರ್ಯ ರಂಗಾರ ಸ್ಪರ್ಧೆ

ಬಿಹಾರಿನ ಗವರ್ನರ್‌ರಾಗಿ ನೇಮಿತರಾಗಿರುವ ಶ್ರೀ ಎಂ. ಅನಂತಶಯನಂ ಅಯ್ಯಂಗಾರ್ಯರು ಆಯ್ಕೆ ಆಗಿರುವ ಲೋಕಸಭೆ ಖಾಲಿ ಚಿತ್ತೂರು ಕ್ಷೇತ್ರದಿಂದ ಖಾಲಿ ಆಗಿದೆ. ಆ ಕ್ಷೇತ್ರದಿಂದ ಸ್ವತಂತ್ರ ಪಕ್ಷದ ಅಧ್ಯಕ್ಷ ಆಚಾರ್ಯ ರಂಗಾ ಸ್ಪರ್ಧಿಸಿದ್ದಾರೆ. ಲೋಕಸಭೆಗೆ ಆಚಾರ್ಯ ರಂಗಾ ಚುನಾವಣೆ ಆಗಬೇಕೆಂದು ರಾಜಾಜಿ ನಿರ್ದಿಷ್ಟವಾಗಿದ್ದಾರೆ.

ಸಮ್ಮೇಳನ ವಿಫಲ

ಜಾರ್ಜಿಬಾರಿಗೆ ಸ್ವತಂತ್ರ ದೊರೆಯುವ ತಾರೀಖು ನಿರ್ಧಾರವಾಗದೆ ಆ ಸಂಬಂಧದ ಘಟನಾ ಪರಿಷತ್ತಿನಲ್ಲಿ ಮಾತುಕತೆ ವಿಫಲವಾಯಿತೆಂದು ಲಂಡನ್ ವರದಿ

ವಿದ್ಯಾರ್ಥಿಗಳ ಮುಷ್ಕರ

ಈ ವಾರಾಂತ್ಯದಲ್ಲಿ ನಡೆಯಬೇಕಾಗಿದ್ದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ದಿನಾಚರಣೆಯನ್ನು ಪೋರ್ಚುಗೀಸು ಸರ್ಕಾರ ನಿಷೇಧ ಮಾಡಿದ್ದರಿಂದ ನಿನ್ನೆ ಲಿಸ್ಬನ್ನಿನ ಹತ್ತು ಸಾವಿರ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದರು. 6 ಜನ ವಿಶ್ವವಿದ್ಯಾನಿಲಯದ ನೌಕರರು ರಾಜೀನಾಮೆ ಇತ್ತಿದ್ದಾರೆ.

ರಷ್ಯದಿಂದ ಅಣು ಪ್ರಯೋಗ

ಜಪಾನಿನ ಪ್ರಧಾನಿ ಕಳಿಸಿದ ಸಂದೇಶಕ್ಕೆ ಪ್ರಧಾನಿ ಕ್ರುಶ್ಚೇವರು ಉತ್ತರ ಕೊಟ್ಟು, ಅಮೆರಿಕ ಮತ್ತು ಬ್ರಿಟನ್ ಅಣು ಪ್ರಯೋಗ ಮಾಡಿದರೆ ಶಾಂತಿ ಮತ್ತು ಭದ್ರತಾ ದೃಷ್ಟಿಯಿಂದ ರಷ್ಯ ಪ್ರಯೋಗ ಆರಂಭಿಸುವದು ಎಂದರು.

ಅತೃಪ್ತಿ ಹೆಚ್ಚಿದೆ

ಪೂರ್ವ ಪಾಕಿಸ್ತಾನದ ಚಟಗಾಂಗಿನಲ್ಲಿ ಅತೃಪ್ತಿ ಹೆಚ್ಚಾಗುತ್ತಿದೆ ಅದು ಯಾವಾಗ ಸ್ಫೋಟದಲ್ಲಾದರೂ ಸಿಡಿಯಬಹುದು. ನಿರುದ್ಯೋಗ ಹಾಗೂ ವ್ಯವಹಾರ ಕಾರಣದಲ್ಲಿರುವ ಶೇಕಡ 90 ರಷ್ಟು ಮಂದಿಗೆ ರಾಜಕೀಯ ಜ್ಞಾನವುಂಟಾಗಿದೆ.

★

ಸಂಯುಕ್ತಗಣ ಚುನಾವಣೆ ಕ್ಷೇತ್ರದಿಂದ ಉಪ ಚುನಾವಣೆಗೆ ಸ್ಪರ್ಧಿಸಲು ಮೈಸೂರು ಪ್ರದೇಶದ ಮಾಜಿ ಮಂತ್ರಿ ಡಾ|| ಕೈಲಾಸನಾಥ ಪಟೇಲರಿಗೆ ಕಾಂಗ್ರೆಸಿನ ಹೈ ಕಮಾಂಡು ಅವಕಾಶ ಕೊಟ್ಟ ಒಡನೆ ಮೈಸೂರು ಪ್ರದೇಶದಲ್ಲಿ ಮಂತ್ರಿಗಳು ಖುರ್ಚಿ ಉಳಿಸಿಕೊಳ್ಳಲು ಅದ ಕಲಹ ಪರಿಹಾರವಾಗಿಯಿತೆಂದು ಭೂಪಾಲಿನ ವರದಿ ತಿಳಿಸುತ್ತದೆ.

ತಾ. 24 ರ ವೇಳೆಗೆ
ಕಾಶ್ಮೀರ ಬಗ್ಗೆ ಚರ್ಚೆ

ನ್ಯೂಯಾರ್ಕಿನಿಂದ ಬಂದಿರುವ ವರದಿಯ ಪ್ರಕಾರ, ಪಾಕಿಸ್ತಾನ ನಿಯೋಗಕ್ಕಿಂತ ಸಮಾಪ ವಲಯಗಳು ಅಭಿಪ್ರಾಯವನ್ನಿತ್ತು ಈ ಮಾಹೆ 24 ಅಥವಾ ಅದರೊಳಗೆ ಕಾಶ್ಮೀರ ಬಗ್ಗೆ ಚರ್ಚೆಯಾಗುವದಾಗಿ ತಿಳಿಸಿರುವದು. ಸದಸ್ಯರಲ್ಲಿ ನಡೆದ ಸಮಾಲೋಚನೆಯಿಂದ ಈ ತಾರೀಖು ಅನೇಕರಿಗೆ ಒಪ್ಪಿಗೆ ಆಗಿದೆ ಎಂದು ಗೊತ್ತಾಗಿದೆ.

★

ಸಿಂಹಳದಲ್ಲಿ ನಿನ್ನೆ ಜರೂರು ಪರಿಸ್ಥಿತಿ ಘೋಷ್ಣೆಯಾಯಿತು ಘೆಡಂಕಾಲು ಪ್ರಶ್ನೆದ ಮೇಲೆ ನಿಶೇದಾಜ್ಞೆಯಾಯಿತು

★

ಮೈಸೂರಿನ ಸಮಾಜ ಕಲ್ಯಾಣ ಮಂತ್ರಿ ಶ್ರೀಮತಿ ಯಶೋಧರಮ್ಮ ದಾಸಪ್ಪ ಮತ್ತು ವಿಧಾನ ಸಭೆ ಸದಸ್ಯ ಶ್ರೀ ವತಿಕೆ ಎಸ್ ನಾಗರತ್ನಮ್ಮ ಇವರನ್ನು ಸನ್ಮಾನಿಸಲು ಮೈಸೂರು ಪುಂಭವನದಲ್ಲಿ 9 ನೆಯ ತಾ|| ಮಧ್ಯಾಹ್ನ 4 ಗಂಟೆಗೆ ಮೈಸೂರು ನಗರದ ಮಹಿಳಾ ಸಂಸ್ಥೆಗಳು ಸಭೆ ಏರ್ಪಡಿಸಿದೆ. ಮಹಿಳೆಯರಿಂಗೆಲ್ಲ ಆಹ್ವಾನವಿದೆ.

೦೦೦

ಪಂ|| ನೆಹರು ಮಂತ್ರಿಮಂಡಲ ಈ ದಿನ ಪ್ರಕಟವಾಗುವ ನಿರೀಕ್ಷೆ ಇದೆಯೆಂಬ ದಾಗಿ ದೆಹಲಿ ವಾರ್ತೆ 9 ಅಥವಾ 10 ನೆಯ ತಾ|| ಮಂತ್ರಿ ಮಂಡಲ ಪುನರ್ ರಚನೆ ಸ್ವೀಕರಿಸುವದು

★

ಮುಂದಿನ ಎ ಐ ಸಿ ಸಿ ಅಧಿವೇಶನದಲ್ಲಿ ಚುನಾವಣೆ ಬಗ್ಗೆ ಚರ್ಚಿಸಲು 1 ದಿನ ನಿಗದಿ ಮಾಡಬೇಕೆಂದು ಕಾಂಗ್ರೆಸಿನ ಜೆಂಜರು ಗ್ರೂಪು ಕಾಂಗ್ರೆಸು ಅಧ್ಯಕ್ಷರಿಗೆ ಒರೆದಿದೆ ಎಂದು ದೆಹಲಿ ವಾರ್ತೆ.

ವಿವಿಧ ವಿಷಯಗಳು

ಫಾಲಿಡಾಲು ಕೊಟ್ಟು 6 ಜನರನ್ನು ಕೊಲೆ ಮಾಡಿದ್ದಕ್ಕೆ ಕೋಲಾರ ಜಿಲ್ಲೆ ಚಿಕ್ಕಹಳ್ಳಿಯ ಎಕ್ಕಪ್ಪನಿಗೆ ಸೆಷನ್ಸ್ ನ್ಯಾಯಾಧೀಶರು ಫಾಶಿ ವಿಧಿಸಿದರೆಂದು ಜೆಂಗಳೂರು ವಾರ್ತೆ

51 ಕಳವು ಮಾಡಿದ ಚಟ್ಟಿಬಾಬಗೆ 2 ವರ್ಷ ಕಠಿಣ ಸಜೆ ಆಯಿತೆಂದು ಮದರಾಸು ವಾರ್ತೆ.

ಹುಬ್ಬಳ್ಳಿಯಲ್ಲಿ ವಿಮಾನ ನಿಲ್ದಾಣ ರಚಿಸವಾಗುವ ಭೂವಸೆಯನ್ನು ಮುಖ್ಯ ಮಂತ್ರಿ ಶ್ರೀ ಕಂತಿಯವರು ಹುಬ್ಬಳ್ಳಿಯಲ್ಲಿ ಇತ್ತರು

ಹಣಕಾಸು ಮತ್ತು ಶಿಕ್ಷಣ ಖಾತೆಯನ್ನು ಬಿಡಿ ವಸೂಚನೆಯನ್ನು ಮುಖ್ಯ ಮಂತ್ರಿ ಶ್ರೀ ಕಂತಿಯವರು ಧಾರವಾಡದಲ್ಲಿ ತಿಳಿಸಿದರು

ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ವಿಷಯ ಕೂಡದೆಂಬ ತಿದ್ದುಪಡಿ ಕೇರಳ ವಿಧಾನ ಸಭೆಯಲ್ಲಿ ಅಂಗೀಕೃತವಾಯಿತು

ಒಟ್ಟು ವರದ ಕೊಂಬೆಗಳಿಂದ ಕಾಯಾರಾದ ಧೂಮ ನಿಶೇಧ ಗುಳಿಗೆಗಳು ಕಳೆದ ಕೆಲವು ದಿನಗಳಿಂದ ಶೇಕಡ ಸಾವಿರದಷ್ಟು ಹೆಚ್ಚು ಮಾರಾಟವಾಗುತ್ತಿದೆ ಎಂದು ಲಂಡನ್ನಿನ ವಾರ್ತೆ ತಿಳಿಸುತ್ತದೆ

ನಾಳೆಯ ಪಂಚಾಂಗ

ಅಸ್ಥಾನ ವಿದ್ವಾನ್ ದರ್ಶಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಕ್ಕಯ್ಯ ಜೋಯಿಸರಿಂದ

8 ಚೈತ್ರ ಕೃಷ್ಣ

ವಾರ್ತಾವಿಶೇಷಗಳು

ಮಾರ್ಚ್ 15 ಕ್ಕೆ ಕೊನೆಗೊಂಡ ಮಾಸಾರ್ಧದಲ್ಲಿ 6 ಸಂಸ್ಥೆಗಳ ಕಾರ್ಮಿಕರು ಮುಷ್ಕರ ಹೂಡಿದ್ದರಿಂದ 991 ಮನುಷ್ಯ ದಿನಗಳು ನಷ್ಟವಾದವೆಂದು ಮೈಸೂರು ರಾಜ್ಯದ ಕಾರ್ಮಿಕ ಇಲಾಖೆಯ ಮುಖ್ಯಾಧಿಕಾರಿಗಳು ತಿಳಿಸುತ್ತಾರೆ.

೦೦೦೦

ಸಮಾಜ ಕಲ್ಯಾಣ ಮಂತ್ರಿ ಶ್ರೀಮತಿ ಯಶೋಧರ ದಾಸಪ್ಪನವರು ಈ ಮಾಹೆ ಮೈಸೂರು ಜಿಲ್ಲೆಯ ಪ್ರವಾಸವನ್ನು ಕೈಗೊಳ್ಳುವರು. ಪ್ರವಾಸ ತಾ|| 7 ರಿಂದ 10 ರ ವರೆಗೆ.

೦೦೦೦

ದೇಶದಲ್ಲಿ 1961 ರಿಂದ 62 ರ ವರ್ಷದಲ್ಲಿ ಕೇಂದ್ರ ಸರ್ಕಾರಿಗಳ ಮಳಿಗೆಗಳ ಸಂಖ್ಯೆ 40 ರಿಂದ 60 ಕ್ಕೆ ಹೆಚ್ಚಿದೆ. ಕೇಂದ್ರ ವೇರ್ ಹೌಸಿಂಗ್ ಕಾರ್ಪೊರೇಷನ್ ನಡೆಸುತ್ತಿರುವ 60 ಮಳಿಗೆಗಳು ಮತ್ತು ರಾಜ್ಯ ವೇರ್ ಹೌಸಿಂಗ್ ಕಾರ್ಪೊರೇಷನ್‌ಗಳು ನಡೆಸುತ್ತಿರುವ ಸುಮಾರು 360 ಮಳಿಗೆಗಳು ಈ ಮಾಹೆ 16 ರಿಂದ 22 ರ ವರೆಗೆ ವಿಶೇಷ ಸಪ್ತಾಹವನ್ನು ಆಚರಿಸುವುವು.

೦೦೦೦

ಮೈಸೂರು ರಾಜ್ಯದ 7 ಸ್ಥಳೀಯ ಸ್ವಾಧಿಕಾರ ಸಂಸ್ಥೆಗಳು ಈ ವರ್ಷ ಮೇ 6 ರಂದು ರಾಜ್ಯದ ವಿಧಾನ ಸಭೆಗೆ ಒಬ್ಬೊಬ್ಬ ಸದಸ್ಯನನ್ನು ಆರಿಸಲಿವೆ. ಆ ಸ್ಥಳೀಯ ಸ್ವಾಧಿಕಾರ ಸಂಸ್ಥೆಯೆಂದರೆ — ಬಿದರೆ, ಬೆಳಗಾವಿ, ಉತ್ತರ ಕನ್ನಡ, ಧಾರವಾಡ, ಚಿತ್ರದುರ್ಗ, ಕೋಲಾರ ಮತ್ತು ಬೆಂಗಳೂರು.

೦೦೦೦

ರಾಜ್ಯಗಳಲ್ಲಿರುವ ಬಾರ್ ಕೌನ್ಸಿಲುಗಳು, ಕಳೆದ ವರ್ಷದಲ್ಲಿ ತಾವು ಸಂಗ್ರಹಿಸಿದ ಒಟ್ಟು ಚಂದಾಹಣದಲ್ಲಿ ಶೇಕಡಾ 40 ರಷ್ಟನ್ನು ಬಾರ್ ಕೌನ್ಸಿಲ್ಲಿಗೆ ಕೊಡಬೇಕಾಗುವದು. ಅದನ್ನು ಪ್ರತಿ ವರ್ಷ ಏಪ್ರಿಲ್ 30 ರೊಳಗಾಗಿ ಕೊಡಬೇಕು

೦೦೦೦

ಸುಧಾರಿತ ವ್ಯವಸಾಯದಲ್ಲಿ ವ್ಯವಸಾಯಗಾರರ ಮಕ್ಕಳಿಗೆ ಶಿಕ್ಷಣವನ್ನು ಕೊಡಲು ಎರಡು ಶಿಕ್ಷಣ ಕೇಂದ್ರಗಳನ್ನು ಮೈಸೂರು ಸರ್ಕಾರ ಆರಂಭಿಸುವ ಯೋಜನೆ ಹೊಂದಿದೆ. ಒಂದು ಕೇಂದ್ರಕ್ಕೆ ರೂ 50 ಸಾವಿರ ವೆಚ್ಚ ಅಂದಾಜಾಗಿದೆ. ಒಂದು ಕೇಂದ್ರದಲ್ಲಿ 25 ವಿದ್ಯಾರ್ಥಿಗಳು ಇರುವರು.

Help The 'Gorakshana'

Advertise in Goraksana and help the pious cause

ಗೋರಕ್ಷಣಾ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

"ಗೋರಕ್ಷಣ" ಪತ್ರಿಕೆಗೆ ಜೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣಾ ಪತ್ರಿಕೆಗೆ ಸಹಾಯದವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Edited, Printed & Published by the Proprietor, Dharma Pradhara Nirata M. S. Krishna Rao, at the Satyavadi Press Chamarajapuram, Mysore 4.

ಮೈಸೂರು ಸಿಟಿ ಮುನಿಸಿಪಲ್ ಹೆಲ್ತ್ ಆಫೀಸಿನಿಂದ

ಪ್ರಕಟಣೆ

ಮೈಸೂರು ಸಿಟಿ ಮುನಿಸಿಪಲ್ ಹೆಲ್ತ್ ಆಫೀಸಿನಿಂದ ಹೆಲ್ತ್‌ಸೆಕ್ಷ್ ಟ್ರೇಡ್ ಲೈಸೆನ್ಸ್‌ದಾರರುಗಳಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೈಸೂರು ಸಿಟಿ ಮುನಿಸಿಪಲ್ ಬೈಲಾ ಛಾಪ್ಟರ್ (chapter) 16, ರೂಲು 3 ರ ಪ್ರಕಾರ ಹೆಲ್ತ್ ಸೆಕ್ಷನ್ನಿಗೆ ಸಂಬಂಧಪಟ್ಟ ಲೈಸೆನ್ಸ್‌ಗಳನ್ನು 1962–63 ನೇ ಸಾಲಿಗೆ ರನ್ನೂ ಮಾಡಿಸಿಕೊಳ್ಳಲು ತಾ || 15–4–1962 ರವರೆಗೆ ಹಾಲಿ ಜಾರಿಯಲ್ಲಿರುವ ಅಪ್ತಿಕೇಷನ್ ಫಾರಂಗಳಲ್ಲಿ ನಿಗದಿಯಾದ ಲೈಸೆನ್ಸು ಫೀಯನ್ನು ಮುನಿಸಿಪಲ್ ಟ್ರೆಜರಿಗೆ ಕಟ್ಟಿ ಸಂಬಂಧಪಟ್ಟ ಚಲ್ತ ಮತ್ತು ಹಳೇ ಲೈಸೆನ್ಸುಗಳೊಡನೆ ಈ ಆಫೀಸಿಗೆ ಹಾಜರ್ ಪಡಿಸಿ ತಮ್ಮ ಲೈಸನ್ಸುಗಳನ್ನು ರನ್ನೂ ಮಾಡಿಸಿಕೊಳ್ಳುವುದು : ತಪ್ಪಿದಲ್ಲಿ ಖಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕಾಗುವುದು.

ಸಿ. ಆರ್. ಬಾಲಸುಬ್ರಹ್ಮಣ್ಯ
ಹೆಲ್ತ್ ಆಫೀಸರ್
ಸಿಟಿ ಮುನಿಸಿಪಲ್ ಆಫೀಸರ್, ಮೈಸೂರು.

29–3–62

ವುಡ್‌ಲ್ಯಾಂಡ್ಸ್ ಮಹೋನ್ನತ 9 ನೆ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್
ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಅಮೋಘ 3 ನೇ ವಾರ

ಶಾರದ (ತಮಿಳು)

ನಾಕ್ಯ— ಎಸ್ ವಿ ರಂಗರಾವ್, ಎಂ ಆರ್ ರಾಧ, ಎಸ್ ಎಸ್ ರಾಜೇಂದ್ರನ್
ನಾರಂಗಪಾಣಿ, ಎಂ ವಿ ರಾಜಮ್ಮ, ಸಂಧ್ಯ, ಮುತ್ತುಲಕ್ಷ್ಮಿ
ರಾಜಧಾನಿಯಲ್ಲಿ ಪ್ರಪ್ರಥಮ ಪ್ರದರ್ಶನ [ದಿನವಹಿ 3 ಆಟಗಳು]

SHAKTI
SUDHA

A Superb Tonic